# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | : ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 838 (977) |
| ಉತ್ತರಿಸುವ ಸಚಿವರು | : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 17.12.2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಎಷ್ಟು ಜವಳಿ ಪಾರ್ಕ್‌ಗಳು ಇವೆ: ಹಾವೇರಿ ಜಿಲ್ಲೆಯನ್ನು ಹೊರತು ಪಡಿಸಿ ಬೇರೆ ಯಾವ ಜಿಲ್ಲೆಗಳಲ್ಲಿ ಈ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲಾಗಿದೆ. | ರಾಜ್ಯದಲ್ಲಿ ಒಟ್ಟು 07 ಜವಳಿ ಪಾರ್ಕಗಳು ಇವೆ.<br>ಇದರಲ್ಲಿ ಸರ್ಕಾರಿ ಒಡೆತನದಲ್ಲಿ 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.<br>ಖಾಸಗಿ ಒಡೆತನದಲ್ಲಿ 06 ಜವಳಿ ಪಾರ್ಕ್‌ಗಳಿವೆ.<br>ಖಾಸಗಿ ಒಡೆತನದಲ್ಲಿ ಇರುವ ಜವಳಿ ಪಾರ್ಕಗಳ ಪೈಕಿ 05 ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿವೆ ಮತ್ತು 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br><br>ಹಾವೇರಿ ಜಿಲ್ಲೆಯನ್ನುಹೊರತು ಪಡಿಸಿ ಬೇರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾರ್ಕ್‌ಗಳ ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| (ಆ) | ಈಗಾಗಲೇ ಸ್ಥಾಪಿತವಾಗಿರುವ ಜವಳಿ ಪಾರ್ಕ್‌ಗಳಿಂದ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಉದ್ಯೋಗಾವಕಾಶಗಳು ಸೃಷ್ಠಿಯಾಗಿದೆ. | ಕಳೆದ ಮೂರು ವರ್ಷಗಳಲ್ಲಿ ಸ್ಥಾಪಿತವಾಗಿರುವ ಜವಳಿ ಪಾರ್ಕ್‌ಗಳಿಂದ ಒಟ್ಟು 7165 ಜನರಿಗೆ ಉದ್ಯೋಗಾವಕಾಶಗಳು ಸೃಜನೆಯಾಗಿರುತ್ತವೆ. |
| (ಇ) | ಈ ಸ್ಥಾಪಿತ ಜವಳಿ ಪಾರ್ಕ್‌ಗಳಲ್ಲಿ ಮಹಿಳಾ ನೌಕರರು ಹೆಚ್ಚಾಗಿದ್ದು ಇವರಿಗೆ ಸುಧಾರಿತ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ: | ಮಹಿಳೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಿದ್ಧ ಉಡುಪು ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅಂತಹ ಘಟಕಗಳಲ್ಲಿ ಮಹಿಳೆ ನೌಕರರಿಗೆ ಅವಶ್ಯವಿರುವ ಶೌಚಾಲಯಗಳು, ಬಾಲವಾಡಿ (ಕ್ರೀಚ್), ವಿಶ್ರಾಂತಿ ಕೊಠಡಿ, ಕುಡಿಯುವ ನೀರಿನ ವ್ಯವಸ್ಥೆ, ಉಪಹಾರ ಗೃಹ, ಪ್ರಥಮ ಚಿಕಿತ್ಸೆ ಕೇಂದ್ರ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. |
| (ಈ) | ಈ ಜವಳಿ ಪಾರ್ಕ್‌ಗಳಲ್ಲಿ ಮಹಿಳಾ ಉದ್ಯಮಿಗಳಿಗೆ ಕೈಗಾರಿಕೆ ಸ್ಥಾಪಿಸಲು ಸರ್ಕಾರದ ವತಿಯಿಂದ ಸಹಾಯಧನ ನೀಡಲಾಗುತ್ತಿದೆಯೇ: ಅಥವಾ ಬೇರೆ ಯಾವುದಾದರೂ ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ? | ಉದ್ದೇಶಿತ ಜವಳಿ ಪಾರ್ಕ್‌ಗಳಲ್ಲಿ ಮಹಿಳೆ ಉದ್ದಿಮೆದಾರರು ಘಟಕ ಸ್ಥಾಪಿಸಿದ್ದಲ್ಲಿ, ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ 2019-24 ರಡಿ ವಲಯವಾರು ನಿಗಧಿಯಾಗಿರುವ ರಿಯಾಯಿತಿ ಮತ್ತು ಪ್ರೋತ್ಸಾಹಧನದ ಮೇಲೆ ಶೇ.5 ರಷ್ಟು ಹೆಚ್ಚುವರಿ ಸಹಾಯಧನವನ್ನು ನೀಡಲಾಗುತ್ತಿದೆ.<br>ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಸಣ್ಣ ಮತ್ತು ಅತೀ ಸಣ್ಣ ಘಟಕಗಳ ಸ್ಥಾಪನೆ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ/ ಪಂಗಡದ ಮಹಿಳೆ ಉದ್ದಿಮೆದಾರರು ಘಟಕ ಸ್ಥಾಪಿಸಿದ್ದಲ್ಲಿ ಶೇ.90 ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ. |

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ

## ರಾಜ್ಯ ಸರ್ಕಾರ ಒಡೆತನದ ಆಂಕರ್ ಮಾದರಿ-ಪಾರ್ಕ್

| ಕ್ರ. ಸಂ. | ಜಿಲ್ಲೆ | ಪಾರ್ಕ್‌ನ ಹೆಸರು | ಕಳೆದ ಮೂರು ವರ್ಷಗಳ ಉದ್ಯೋಗದ ಸಂಖ್ಯೆ |
|---|---|---|---|
| 1. | ಹಾವೇರಿ | ಶಿಗ್ಗಾಂವಿ ಜವಳಿ ಪಾರ್ಕ್, ಶಿಗ್ಗಾಂವಿ, ಹಾವೇರಿ ಜಿಲ್ಲೆ | ಈ ಜವಳಿ ಪಾರ್ಕ್‌ನಲ್ಲಿ ಆಂಕರ್ ಪ್ರಮೋಟರ್ ಘಟಕವಾಗಿ ಮೆ|| ಟೆಕ್ಸಾನಾ ವರ್ಲ್ಡ್ ಪ್ರೈ ಲಿ., ಸ್ಥಾಪನೆಯಾಗಿದ್ದು ಸದ್ಯದಲ್ಲೆ ಉತ್ಪಾದನೆ ಪ್ರಾರಂಭಿಸಲಿದ್ದಾರೆ. |

## ಹಾವೇರಿ ಜಿಲ್ಲೆಯನ್ನುಹೊರತು ಪಡಿಸಿ, ಇತರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜವಳಿ ಪಾರ್ಕ್‌ಗಳ ವಿವರ

| ಕ್ರ.ಸಂ. | ಜಿಲ್ಲೆ | ಜವಳಿ ಪಾರ್ಕ್‌ನ ಹೆಸರು | ಕಳೆದ ಮೂರು ವರ್ಷಗಳ ಉದ್ಯೋಗದ ಸಂಖ್ಯೆ |
|---|---|---|---|
| 1. | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್, ದೊಡ್ಡಬಳ್ಳಾಪುರ (ಕೇಂದ್ರ ಸರ್ಕಾರದ ಅನುಮೋದಿತ SITP (Scheme for Integrated Textile Park) | 200 |
| 2. | ಚಿತ್ರದುರ್ಗ | ಬೈನರಿ ಅಪೇರೆಲ್ ಟೆಕ್ಸ್‌ಟೈಲ್ ಪಾರ್ಕ್ ಲಿ., ಹಿರಿಯೂರು ತಾಲ್ಲೂಕು | 3000 |
| 3. | ದಾವಣಗೆರೆ | ದಾವಣಗೆರೆ ಟೆಕ್ಸ್‌ಟೈಲ್ ಪಾರ್ಕ್ ದಾವಣಗೆರೆ | 1960 |
| 4. | ಬೆಳಗಾವಿ | ಬೋರಗಾಂವ ಟೆಕ್ಸ್‌ಟೈಲ್ ಪಾರ್ಕ್) ಬೋರಗಾಂವ | 351 |
| 5. | ಬೆಳಗಾವಿ | ಕುರಣೆ ಟೆಕ್ಸ್‌ಟೈಲ್ ಪಾರ್ಕ್ , ಬುಗಟೆ ಆಲೂರು ತಾಲ್ಲೂಕು ಹುಕ್ಕೇರಿ | 104 |
| 6. | ಬಳ್ಳಾರಿ | ಬಳ್ಳಾರಿ ಟೆಕ್ಸ್‌ಟೈಲ್ ಪಾರ್ಕ್ ಬಳ್ಳಾರಿ | 1550 |
| | | **ಒಟ್ಟು** | **7165** |

12/12/2024

ಸರ್ಕಾರದ ಉಪ ಕಾರ್ಯದರ್ಶಿಗಳು (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ